4. ಟೆಂಡರುಗಳ ಸಮೇತ ವಂದು ನೂರು ರೂಪಾಯಿಗಳನ್ನು ನಗದೀಯಾಗಲಿ ಕರೆನ್ಸೀ ನೋಟ್ ಮೂಲಕವಾಗಿಯಾಗಲಿ ಠೇವಣೀ ಹಾಜರ್ ಮಾಡಬೇಕು. ಠೇವಣೀ ಮೊಬಲಗು ಯಿಲ್ಲದೇ ಬರುವ ದರಖಾಸ್ತುಗಳನ್ನು ಅಂಗೀಕರಿಸಲ್ಪಡುವದಿಲ್ಲವು.

5. ಪ್ರತಿ ದರಖಾಸ್ತುದಾರನೂ ನಾಟು ಯಾ ಚಲಗು ಜಮಾಯಿಸುವದಕ್ಕೆ ಸಲೆ ಅಡಿ 1ಕ್ಕೆ ಬಿದರುಗಳು ಜಮ್ಮಾಯಿಸುವದಕ್ಕೆ ಕೇಕಡಾ ವಂದಕ್ಕೆ ದರ ನಮೂದಿಸಬೇಕು.

6. ಯಾವ ಟೆಂಡರನ್ನಾಗಲೀ ಕಾರಣವನ್ನು ತೋರಿಸದೇ ತಿರಸ್ಕರಿಸಲಿಕ್ಕೆ ಫಾರೆಸ್ಟ್ ಅಸಿಸ್ಟೆಂಟ್ ಕ್ಯಸರ್‌ವೇಟರ್ ಸಾಹೇಬರವರು ಸ್ವತಂತ್ರರಾಗಿ ಯಿರುತ್ತಾರೆ.

7. ಜಂಗಲಿಯಲ್ಲಿ ಫಾರೆಸ್ಟ್ ಇಲಾಖೇಯವರು ನಿರ್ಣಾ ಮಾಡಿದ ಮರವನ್ನು ಕಡದು ಹಂಚಿಕವಾಗಿ ಕೆತ್ತಿ ಡಿಪೋಕ್ಕೆ ಸಾಗಿಸುವದಕ್ಕೆ ದರಖಾಸ್ತುದಾರನು ಬದ್ಧನಾಗಿ ಯಿರತಕ್ಕದ್ದು.

8. ಕಂಟ್ರಾಕ್ಟು ಮಂಜೂರಾದ ತಾರೀಖು ಲಾಗಾಯತು ವಂದು ವಾರದವಳಗಾಗಿ ನ್ಯಾಯವಾದ ಸ್ಟ್ಯಾಂಪು ಕಾಗದದಮೇಲೆ ಕಂಟ್ರಾಕ್ಟು ಮುಚ್ಚಳಿಕೆ ಬರಕೊಡದೇ ತಪ್ಪಿದ ಪಕ್ಷದಲ್ಲಿ ಠೇವಣೀ ಮೊಬಲಗು ಸರಕಾರಕ್ಕೆ ಜೀರಿಸಿಕೊಳ್ಳಲ್ಪಡುತ್ತದೆ.

9. ಕಂಟ್ರಾಕ್ಟು ಮುಚ್ಚಳಿಕೆ ನಮೂನೇ ವ ಷರತ್ತುಗಳು ಮತ್ತು ಕಂಟ್ರಾಕ್ಟುದಾರಿಗೆ ಬೇಕಾದ ಇತರ ವಿಷಯಗಳನ್ನು ಫಾರೆಸ್ಟ್ ಅಸಿಸ್ಟೆಂಟ್ ಕ್ಯಸರ್‌ವೇಟರ್ ಸಾಹೇಬರವರ ಆಫೀಸಿನಲ್ಲಿ ಹಾಜರಾಗಿ ತಿಳಿದುಕೊಳ್ಳತಕ್ಕದ್ದು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಅಂಬಕೇ ಇಲಾಖಾ.

ನಂ. 247—137. ತಾರೀಖು 31ನೇ ಆಗಸ್ಟು 1887.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರ ಶ್ರೀಮಂ ಮಹಾರಾಜ ರಾಜಾಸಾಹೇಬ್ ಬಹದೂರವರ ದೀರ್ಘಾರವರ ಅಪ್ಪಣೇ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳ ವೊಳಗೆ ಹೋಬಳೀ ಅಂಬಕೇ ಆಫೀಸ್‌ಗಳು ಸ್ಥಾಪಿಸಲ್ಪಟ್ಟು ಇರುತ್ತೆ.

ತಾಲ್ಲೂಕು.	ಅಂಬಕೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳದ ಹೆಸರು.
ತಿಪಟೂರು	ಹೆಮ್ಮಿಗೆ
ತುಮಕೂರು	ನೆಲಹಾಲ್

ಬಿ. ಮರಿಗಂಗಯ್ಯ,
ಅಂಬಕೇ ಬಕ್ಷಿ.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿ॥ ಅರ್ಜೀ ನಂಬರ್ 703.

ಕ್ಯಾಖಾನಹಳ್ಳಿ ತಾಲ್ಲೂಕು ಚಿಕ್ಕಮುದವಾಡಿಯಲ್ಲಿದ್ದು ಮೃತಪಟ್ಟ ಶಿದ್ದಲಿಂಗೇಗವುಡನ ಹೆಂಡತಿ ಚನ್ನಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಕ್ಯಾಖಾನಹಳ್ಳಿ ತಾ॥ ಚಿಕ್ಕಮುದವಾಡಿಯಲ್ಲಿ ಇರುವ ಚಿಕ್ಕಗವುಡನ ಮಗ ಕೆಂಚೇಗವುಡ ಮೃತಪಟ್ಟ ಸದರೀ ಶಿದ್ದಲಿಂಗೇಗವುಡನ ಹೆಂಡತಿ ಚನ್ನಮ್ಮನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮುದವಾಡಿ ಸ್ಥಳದ ಕೆಂಚೇಗವುಡರು ಡಿಟೋ ವಾಸಸ್ಥರಾಗಿ ಮೃತಪಟ್ಟ ಶಿದ್ದಲಿಂಗೇಗವುಡನ ಹೆಂಡತಿ ಚನ್ನಮ್ಮನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಚೇಗವ್ವಡರ ಅರ್ಜೀಯನ್ನು 1887ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದಲಿಂಗೇಗವ್ವಡನ ಹೆಂಡತಿ ಚನ್ನಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಆಗಸ್ಟು ತಿಂಗಳು 31ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನ ನಮ್ಮ ದಸ್ತಖತ್ತಿನೆ ಕೊಡೋಣಾಗಿದೆ.

ಸಿ. ಕೈನ್ಸ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 25ನೇ ಆಗಸ್ಟು 1887.

ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ರಜಿಸ್ಟ್ರೀ ಆಫೀಸಿನಲ್ಲಿ ಈ ಕೆಳಗೆ ವಿವರಿಸೋಣಾದ ರಜಿಸ್ಟ್ರಾದ 1 ತಂಸೂಕು 2 ಮ ರುಷಗಳಿಗೆ ಮೇಲ್ಪಟ್ಟ ಕಾಲದಿಂದ ಹಾಜರ್ಮಾಡಿದವನು ವಾಪಸ್ ಕೇಳದೇ ಇರುವ ಕಾರಣ ನಿಂತಿರುತ್ತೆ ಡಿಟೋ ತಂಸೂಕನ್ನು ಹಾಜರ್ಮಾಡಿ ದವನಾಗಲಿ ಅಥವಾ ವಾಪಸ್ ಪಡಿಯಲು ಅಧಿಕಾರ ಹೊಂದಿದವರಾಗಲಿ ಈ ಲಾಗಾಯ್ತು 1 ತಿಂಗಳೊಳಗೆ ಚಿಕ್ಕಬಳ್ಳಾಪುರ ಸಬ್ ರಜಿ ಸ್ಟ್ರಾರ್ರ ರೂಬರೂ ಹಾಜರಾಗಿ ರೂಲ್ಸ್ ಮೇರಿಗೆ ಪಾವತೀ ಮಾಡಬೇಕಾಗಿರುವ ಭವ್ಯ ಪಡಿಸಿದ ಫೀಜು ಪಾವತೀ ಮಾಡಿ ವಾಪಸ್ ಪಡೆಯ ಬಹುದು ತಪ್ಪಿದರೆ ರಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುವದು:—

ರಜಿಸ್ಟ್ರಿಗೆ ಇಸವಿ ಪುಸ್ತಕ ನಂಬರ್.	ಕಕ್ಷಿಗಾರ್ರ ಹೆಸರು.		ಅಂಸೂಕಿನ ತಾರೀಖು.	ರಜಿಸ್ಟ್ರಿಗೆ ಹಾಜರ್ ಪಡಿಸಿದ ತಾರೀಖು.	ರಜಿಸ್ಟ್ರಾದ ತಾರೀಖು.	ಸ್ವಭಾವ.
	ಬರದುಕೊಟ್ಟವರ ಹೆಸರು.	ಬರಸಿಕೊಂಡವರ ಹೆಸರು.				
1885—86ನೇ ಇಸವಿ 82ನೇ ನಂಬರು.	ಪೇರೇಸಂದ್ರದಲ್ಲಿ ಇರುವ ಜಂಗಮಕೋಟಿ ಸಿಂಕಪುರಾಜು ನಂಗ ಸುಬ್ಬಿರಾಜು.	ಪೇರೇಸಂದ್ರದಲ್ಲಿ ಇರುವ ಚಿಟ್ಟಿರಾಮಯ್ಯನ್ನ ಕೂಡನೂರ ಸ್ವಾಮಯ್ಯ.	1885ನೇ ಇಸವಿ ಜೂನ್ ತಾರೀಖು 24.	1ನೇ [illegible] ತಾರೀಖು 26.	1885ನೇ ಇಸವಿ ಜೂನ್ ತಾರೀಖು 26.	ಪೇರೇಸಂದ್ರ ಗ್ರಾಮದ ಬಳಿ ಪೂರ್ವ ಕಡೆ ನೀರಿಂದಪಚ್ಚನ ತೋಪಿನ ಪಶ್ಚಿಮ ಇರುವ ಬರ ಬುಕೊಟ್ಟಿರುವ ಸ್ವಂತ ಕಾಯಿಯದ 73ನೇ ನಂಬರು ತೋ॥ ಜನಿರ್ಡ್ ೧೦॥ ಗುಂಟೆ ಜಮೀನನ್ನು 20 ರೂಪಾಯಿಗಳಿಗೆ ಕ್ರಯಕ್ಕೆ ಕೊಟ್ಟು ಇರುವುದು.

ಸಿ. ಸುಬ್ಬರಾವ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 419.

ಮೃತಪಟ್ಟ ಅರುಣಾಚಲ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ಚಂದ್ರಶೇಖರ ಮೊದಲಿ, 2ನೇ ಲೋಕನಾಥಮೊದಲಿ, 3ನೇ ವಿಶ್ವನಾಥಮೊದಲಿ 2—3ನೇ ಪ್ಲೈನರ್‌ಗಾರ್ಡಿಯರ್ ಮೃತಪಟ್ಟ ಸದರೀ ಅರುಣಾಚಲ ಮೊದಲಿಯಾರ್ರಿಗೆ 1ನೇ ಅರ್ಜೀದಾರ್ರು ಮಕ್ಕಳಾಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಯಿಟ್ಟಿಗೇ